

## ನಕ್ಕುಬಿಡಿ

**ಡಾಕ್ಟರ್:** ಅಲ್ಲಯ್ಯಾ ಗುಂಡ, ಸ್ವರ್ಗದ ಬಗ್ಗೆ ನಿನಗೆ ಈ ರೀತಿ ತಪ್ಪು ಕಲ್ಪನೆ ಮೂಡಿಸಿದವರು ಯಾರು?

**ಗುಂಡ:** ನಮ್ಮ ನಾರಾಯಣ ಡಾಕ್ಟ್ರೇ!

**ಡಾಕ್ಟರ್:** ವಿಚಿತ್ರ ಆಗಿದೆ! ನೀನು ದೇವರ ಬಗ್ಗೆ ಹೇಳ್ತಾ ಇದ್ದೀಯಾ?

**ಗುಂಡ:** ಛೇ ಇಲ್ಲ ಡಾಕ್ಟ್ರೇ. ನಾನು ಪ್ರತಿ ದಿನ ಹೋಗುವ ಮಹಾಲಕ್ಷ್ಮಿ ಬಾರ್ ಅಂಡ್ ರೆಸ್ಟೋರೆಂಟ್‌ನ ವೇಟರ್ ನಾರಾಯಣ!

***

**ಸುಬ್ಬಿ:** ಏನೋ ಗುಂಡ, ನಿನ್ ಮಗಳ ಮದುವೆ ಮತ್ತೆ ಮುಂದೆ ಹೋಯಿತಂತೆ?

**ಗುಂಡ:** ಅಯ್ಯೋ ಎಲ್ಲ ನನ್ ಗ್ರಹಚಾರ. ನಮ್ ಭಾವೀ ಅಳಿಯ ಕೋರ್ಟಿನಲ್ಲಿ ಲಾಯರು, ಹಿಯರಿಂಗ್ ಮುಂದೆ ಹಾಕಿ ಹಾಕಿ ಅಭ್ಯಾಸ. ಅದೇ ರೀತಿ ನಮ್ಮ ಮಗಳ ಮದುವೇನೂ..!




ಸರ್....ನಿಮ್ಮ ಅನುಮಾನ ಸರಿಯಾಗಿದೆ
ಇಷ್ಟು ದಿನ ಹುಡುಕ್ತಾ ಇದ್ದ ಕಳ್ಳ ಇವನೇ....

ಹೋಟೆಲ್ ಮುಂದೆ ಈ ದಿನದ ಸ್ಪೆಷಲ್ 'ಚಿತ್ರಾನ್ನ' ಅಂತ ಬೋರ್ಡ್ ಹಾಕಿದ್ರು.

**ಗುಂಡ:** ಏನಯ್ಯ ಮಾಣಿ, ನಿನ್ನೆ ಬಂದಾಗ್ಲೂ ಇದೇ ಬೋರ್ಡು ಇತ್ತು. ಯಾಕೆ ಇನ್ನೂ ಬದಲಾಯಿಸಲೇ ಇಲ್ವಾ?

**ಮಾಣಿ:** ಇಲ್ಲ ಸಾರ್ ನಿನ್ನೆ ಬರೆದ ಬೋರ್ಡ್ ಹಾಗೆ ಇರಲಿ ಅಂತ ನಮ್ ಯಜಮಾನ್ರು ಹೇಳಿದ್ದಾರೆ.

**ಗುಂಡ:** ಹೌದಾ, ಯಾಕೆ ಹಾಗೆ ?

**ಮಾಣಿ:** ನಿನ್ನೆ ಮಾಡಿದ್ದ ಚಿತ್ರಾನ್ನ ಇನ್ನೂ ಉಳಿದಿದೆ. ಅದಕ್ಕೆ!

***

**ತಿಮ್ಮ:** ಅರೆ ಏನಯ್ಯಾ, ಇಷ್ಟೊಂದು ಬಗೆ ಬಗೆಯ ನ್ಯೂಸ್ ಪೇಪರ್‌ಗಳನ್ನು ಓದುತ್ತಾ ಇದ್ದೀಯಾ?

**ಗುಂಡ:** ನಾನು ತರಿಸೋದಿಲ್ಲ ಕಣೋ! ನಮ್ಮ ಮನೆ ನಾಯಿ ಬೆಳಿಗ್ಗೆನೆ ಈ ಬೀದೀಲಿ ಇರೋ ಎಲ್ಲರ ಮನೆಗಳ ಹತ್ರ ಹೋಗಿ ಗೇಟುಗಳಿಗೆ ಸಿಕ್ಕಿಸಿದ ನ್ಯೂಸ್ ಪೇಪರ್‌ಗಳನ್ನು ಕಚ್ಚಿಕೊಂಡು ನನ್ನ ಹತ್ತಿರ ತಂದು ಹಾಕಿ ಬಿಡುತ್ತೆ!

***

**ಗುಂಡ:** ನಮ್ಮ ಸುಬ್ಬಿಗೆ ಒಂದು ಕೆಟ್ಟ ಅಭ್ಯಾಸ ಇದೆ. ಏನಂದ್ರೆ ಲೈಟ್ ಹಾಕ್ಕೊಂಡು ರಾತ್ರಿ ಎರಡು ಗಂಟೆ ಆದರೂ ಬಾಗಿಲಲ್ಲೇ ನಿಂತಿರುತ್ತಾಳೆ. ನೀವೇ ನೋಡಿ ಡಾಕ್ಟ್ರೇ!

**ಡಾಕ್ಟರ್:** ಯಾಕಮ್ಮ ನಿನಗೆ ನಿದ್ದೆ ಬರೊಲ್ಲವೇ?

**ಸುಬ್ಬಿ:** ಅಯ್ಯೋ ನಂಗೇನೂ ಆಗಿಲ್ಲ ಡಾಕ್ಟ್ರೇ. ಇವ್ರು ತೂರಾಡಿಕೊಂಡು ಮನೆ ಬಾಗಿಲ ಹತ್ತಿರ ಬರೋದೇ ತಡ ರಾತ್ರಿ ಎರಡ್ ಗಂಟೆಗೆ!

***

**ಗುಂಡ:** ತುಂಬಾ ಹೊಟ್ಟೆ ನೋವು ತಡೆದುಕೊಳ್ಳೋಕೆ ಆಗ್ತಾ ಇಲ್ಲ ಡಾಕ್ಟ್ರೇ.

**ಡಾಕ್ಟರ್:** ಯಾಕಯ್ಯಾ.. ಏನು ತಿಂದೆ?

**ಗುಂಡ:** ಹೋದ ವಾರ ನಿಮ್ಮ ಹತ್ತಿರ ತೋರಿಸಲು ಬಂದಿದ್ದಾಗ ಹಣ್ಣುಗಳನ್ನು ಚೆನ್ನಾಗಿ ತಿನ್ನಬೇಕು ಅದ್ರಲ್ಲೂ ಸಿಪ್ಪೆ ತೆಗಿಯದೇ ಹಣ್ಣು ತಿಂದರೆ ತುಂಬಾ ಒಳ್ಳೆಯದು ಅಂತಾ! ಅದಕ್ಕೆ ನಿನ್ನೆ ಸಿಪ್ಪೆ ಸಮೇತ ಹಲಸಿನ ಹಣ್ಣು ತಿಂದೆ ಅಷ್ಟೇ ಡಾಕ್ಟ್ರೇ!

***

**ಡಾಕ್ಟರ್:** ಏನಯ್ಯಾ ಗುಂಡ, ಇಷ್ಟು ದೊಡ್ಡ ಗಾಯ ಮಾಡಿಕೊಂಡು ಬಂದಿದ್ದೀಯಾ ನಿನ್ನ ಕಾಲು ಹೇಗೆ ಮುರಿಯಿತು?

**ಗುಂಡ:** ಬೆಳಿಗ್ಗೆ ವಾಕಿಂಗ್ ಮುಗಿಸಿ ಮನೆಗೆ ಬರೋವಾಗ ಸಿಗರೇಟ್ ಸೇದಿಕೊಂಡು ಬರ್ತಾ ಇದ್ದೆ!

**ಡಾಕ್ಟರ್:** ಅಷ್ಟಕ್ಕೆ ನಿನ್ನ ಕಾಲು ಮುರಿಯೋಕು ಹೇಗೆ ಸಾಧ್ಯ?

**ಗುಂಡ:** ಯಾವಾಗಲೂ ಸಿಗರೇಟ್ ಸೇದಿದ ನಂತರ ಅದನ್ನ ತುಳಿಯೋ ಅಭ್ಯಾಸ ನಂಗೆ. ಯಾವುದೋ ಕೋಪದಲ್ಲಿದ್ದೆ. ದಾರಿಲಿ ಬರುವಾಗ ಮ್ಯಾನ್ ಹೋಲ್ ಮುಚ್ಚಳ ತೆರೆದಿತ್ತು. ಅದನ್ನು ನೋಡದೆ ಸಿಗರೇಟ್ ಬಿಸಾಡಿ ಜೋರಾಗಿ ಕಾಲಲ್ಲಿ ತುಳಿಯೋಕೆ ಹೋದೆ ಅಷ್ಟೇ ಡಾಕ್ಟ್ರೇ!

***

ಸುಬ್ಬಿಗೆ ಜ್ವರ ಬಂದಿತ್ತು ಗುಂಡ ಡಾಕ್ಟರ್ ಹತ್ತಿರ ಅವಳನ್ನ ಕರೆದುಕೊಂಡು ಹೋಗಿದ್ದ.

**ಡಾಕ್ಟ್ರು:** ನೋಡಮ್ಮ ಈ ಥರ್ಮಾ ಮೀಟರ್ ಅನ್ನ ನಿನ್ನ ಬಾಯಲ್ಲಿ ಇಡ್ತೀನಿ. ಎರಡು ನಿಮಿಷ ನೀನು ಬಾಯಿಯನ್ನ ತೆಗಿಲೇಬಾರದು.

**ಸುಬ್ಬಿ:** ಆಯ್ತು ಡಾಕ್ಟ್ರೇ ಹಾಗೇ ಮಾಡ್ತೀನಿ. (ಯಾವಾಗಲೂ ವಟ ವಟ ಅನ್ನುತಿದ್ದ ಸುಬ್ಬಿ ಗಪ್ ಚುಪ್ ಆದಳು)

**ಗುಂಡ:** (ಆಶ್ಚರ್ಯದಿಂದ) ಅರೆ ಇದೆಂಥ ಪವಾಡ ಡಾಕ್ಟ್ರೇ! ಈ ಥರ್ಮಾಮೀಟರ್ ಬೆಲೆ ಅದೆಷ್ಟೇ ಆಗಿರಲಿ. ಮೊದಲು ತಗೋತೀನಿ.

–ಆರ್. ವೀರೇಶ್ ಕುಮಾರ್, ಬೆಂಗಳೂರು

